# ವಾಟ್ಸಾಪ್ ಸಂದೇಶದಲ್ಲಿ ಹೆಸರಿಗೆ ಮಣೆ

**ವಾಟ್ಸಾಪ್ ಅಚ್ಚರಿಯ ಫೀಚರ್ ಪರಿಚಯಿಸಿದೆ. ಗ್ರೂಪ್‌ಗಳಲ್ಲಿ ಮೆಸೇಜ್ ಬಂದರೂ, ಆ ಮೆಸೇಜ್ ಕಳುಹಿಸಿದವರ ನಂಬರ್ ಬದಲಿಗೆ ಅವರ ಹೆಸರು ಮಾತ್ರ ಡಿಸ್‌ಪ್ಲೇ ಆಗಲಿದೆ.**

■ ಶಶಿಕುಮಾರ್ ಸಿ.




ಸಾಲು ಸಾಲು ಫೀಚರ್‌ಗಳು ಪರೀಕ್ಷಾ ಹಂತದಲ್ಲಿದ್ದರೂ 'ವಾಟ್ಸಾಪ್ ಗ್ರೂಪ್'ಗಳ ವಿಚಾರದಲ್ಲಿ ಗಮನ ಸೆಳೆಯುವಂತಹ ವಿಶೇಷ ಫೀಚರ್ ಅನ್ನು ವಾಟ್ಸಾಪ್ ಪರಿಚಯಿಸಿದೆ. ಅದುವೇ, ಗ್ರೂಪ್‌ಗಳಲ್ಲಿ ಸದಸ್ಯರ ಮೊಬೈಲ್ ಸಂಖ್ಯೆ ಕಾಣುವುದರ ಬದಲು ಅವರ ಹೆಸರು ಡಿಸ್‌ಪ್ಲೇ ಆಗುವ ಫೀಚರ್.

ಪ್ರಸ್ತುತ ಕಾಂಟ್ಯಾಕ್ಟ್ ಲಿಸ್ಟ್‌ನಲ್ಲಿರುವವರ ಹೆಸರು ಮಾತ್ರ ಗ್ರೂಪ್‌ಗಳಲ್ಲಿ ಕಾಣುತ್ತದೆ. ಕಾಂಟ್ಯಾಕ್ಟ್‌ನಲ್ಲಿ ಇಲ್ಲದವರ ಮೆಸೇಜ್‌ಗಳ ಮೇಲೆ ಅವರ ಮೊಬೈಲ್ ಸಂಖ್ಯೆ ಕಾಣುತ್ತದೆ. ಕೇವಲ ಮೊಬೈಲ್ ಸಂಖ್ಯೆಯಿಂದಾಗಿ ಗ್ರೂಪ್‌ಗಳಲ್ಲಿ ಮೆಸೇಜ್ ಮಾಡಿದವರನ್ನು ಗುರುತಿಸುವುದು ತುಸು ತ್ರಾಸದಾಯಕ ಕೆಲಸವಾಗಿತ್ತು. ಹೊಸ ಫೀಚರ್‌ನಿಂದಾಗಿ ಇನ್ನುಮುಂದೆ ಗ್ರೂಪ್‌ಗಳಲ್ಲಿ ಮೆಸೇಜ್ ಮಾಡಿದ ವ್ಯಕ್ತಿಯ ನಂಬರ್‌ನ ಜಾಗದಲ್ಲಿ ಅವರ ಹೆಸರು ಕಾಣಲಿದೆ.

ಬಳಕೆದಾರರು ವಾಟ್ಸಾಪ್ ಗ್ರೂಪ್‌ನಲ್ಲಿ ಯಾವುದೇ ಅಪರಿಚಿತ ಸಂಪರ್ಕದಿಂದ ಸಂದೇಶವನ್ನು ಸ್ವೀಕರಿಸಿದರೂ ಚಾಟ್ ಪಟ್ಟಿಯೊಳಗೆ ಬಳಕೆದಾರರ ಫೋನ್ ಸಂಖ್ಯೆ ಬದಲಿಗೆ ಹೆಸರು ಕಾಣಿಸುತ್ತದೆ. ಈ ಮೂಲಕ ನಂಬರ್ ಸೇವ್ ಮಾಡದೆ ಮೆಸೇಜ್ ಕಳುಹಿಸಿದವರು ಯಾರೆಂದು ಸುಲಭವಾಗಿ ತಿಳಿದುಕೊಳ್ಳಬಹುದಾಗಿದೆ. ದೊಡ್ಡ ಸಂಖ್ಯೆಯ ಸದಸ್ಯರನ್ನೊಳಗೊಂಡ ಗ್ರೂಪ್‌ಗಳಲ್ಲಿ ಎಲ್ಲರ ಹೆಸರುಗಳನ್ನು ನೆನಪಿನಲ್ಲಿ ಇಡುವುದು ಅಥವಾ ಎಲ್ಲರ ಸಂಖ್ಯೆಗಳನ್ನು ಸೇವ್ ಮಾಡಿಕೊಳ್ಳುವುದು ಕಷ್ಟ. ವಾಟ್ಸಾಪ್ ಪರಿಚಯಿಸಲಿರುವ ಫೀಚರ್‌ನಿಂದಾಗಿ ಯಾರು ಮೆಸೇಜ್ ಕಳುಹಿಸಿದ್ದಾರೆ ಎಂಬುದನ್ನು ಸುಲಭವಾಗಿ ಕಂಡುಹಿಡಿಯಬಹುದು.



ವಾಟ್ಸಾಪ್‌ನ ಹೊಸ ಫೀಚರ್ ಆಂಡ್ರಾಯ್ಡ್ ಬಳಕೆದಾರರಿಗೆ ಇತ್ತೀಚಿನ ವಾಟ್ಸಾಪ್ 2.23.5.12 ಅಪ್‌ಡೇಟ್‌ನಲ್ಲಿ ಮತ್ತು ಐಒಎಸ್ ಬಳಕೆದಾರರಿಗೆ ಇತ್ತೀಚಿನ 23.5.0.73 ಅಪ್‌ಡೇಟ್‌ನಲ್ಲಿ ಲಭ್ಯವಾಗಲಿದ್ದು, ಪರೀಕ್ಷೆಯ ನಂತರ ಎಲ್ಲಾ ಬಳಕೆದಾರರಿಗೂ ಲಭ್ಯವಿರುತ್ತದೆ ಎಂದು ಮೆಟಾ ತಿಳಿಸಿದೆ.

### 21 ಹೊಸ ಇಮೋಜಿ

ವಾಟ್ಸಾಪ್‌ನಲ್ಲಿ ಹೊಸದಾಗಿ 21 ಹೊಸ ಇಮೋಜಿಗಳು ಕಾಣಿಸಿಕೊಂಡಿವೆ. ಈ ಹೊಸ ಇಮೋಜಿಗಳನ್ನು ವಾಟ್ಸಾಪ್ ಕೀಬೋರ್ಡ್‌ನಿಂದ ನೇರವಾಗಿ ಸೆಂಡ್ ಮಾಡಬಹುದಾಗಿದೆ. 'ವಾಬೇಟಾಇನ್ಫೋ' ಪ್ರಕಾರ ಯುನಿಕೋಡ್ 15.0ನಿಂದ ಈ 21 ಇಮೋಜಿಗಳನ್ನು ಕಳುಹಿಸಲು ಬೇರೆ ಕೀಬೋರ್ಡ್ ಡೌನ್‌ಲೋಡ್ ಮಾಡಬೇಕಾದ ಅಗತ್ಯವಿಲ್ಲ.

ಕೆಲವು ಬಳಕೆದಾರರಿಗೆ ಈಗಾಗಲೇ ಅಧಿಕೃತ ವಾಟ್ಸ್‌ಆ್ಯಪ್ ಕೀಬೋರ್ಡ್ ಮೂಲಕ ಈ ಹೊಸ ಇಮೋಜಿಗಳನ್ನು ಉಪಯೋಗಿಸುವ ಅವಕಾಶ ಕಲ್ಪಿಸಿದೆ. ಇದರ ಮೂಲಕ ಬಳಕೆದಾರರು ಅಕ್ಷರದ ಮೂಲಕ ವ್ಯಕ್ತಪಡಿಸಬಹುದಾದ ಭಾವನೆಗಳನ್ನು ಇಮೋಜಿಗಳಲ್ಲಿ ತಿಳಿಸಬಹುದು. ಈ ಫೀಚರ್ ನಿಮ್ಮ ವಾಟ್ಸಾಪ್ ಖಾತೆಯಲ್ಲಿ ಬಳಸಬೇಕು ಎಂದಾದರೆ ಹೊಸ ಆವೃತ್ತಿಗೆ ಅಪ್ಡೇಟ್ ಆಗಿ.

### ಎಕ್ಸ್‌ಪೈರಿ ಡೇಟ್ ಸವಲತ್ತು

ವಾಟ್ಸಾಪ್ ಗ್ರೂಪ್‌ಗಳಿಗೆ ಎಕ್ಸ್‌ಪೈರಿ ಡೇಟ್ ಫಿಕ್ಸ್ ಮಾಡುವ ಅವಕಾಶವನ್ನು 'ಮೆಟಾ' ಕಲ್ಪಿಸಲಿದೆ. ಎಕ್ಸ್‌ಪೈರಿಂಗ್ ಗ್ರೂಪ್ ಎಂಬ ಫೀಚರ್ ಮೇಲೆ ವಾಟ್ಸಾಪ್ ಕಾರ್ಯನಿರ್ವಹಿಸುತ್ತಿದ್ದು, ಇದರ ಮೂಲಕ ವಾಟ್ಸಾಪ್ ಗ್ರೂಪ್‌ಗಳಿಗೆ ಎಕ್ಸ್‌ಪೈರಿ ಡೇಟ್ ನಮೂದಿಸಿದ ಮೇಲೆ, ಆ ದಿನದ ನಂತರ ತಾನಾಗಿಯೇ ಗ್ರೂಪ್ ನಿಷ್ಕ್ರಿಯಗೊಳ್ಳುತ್ತದೆ.

ಎಕ್ಸ್‌ಪೈರಿ ಡೇಟ್ ಸನಿಹ ಬರುತ್ತಿದ್ದಂತೆ ಆ ಬಗ್ಗೆ ಗ್ರೂಪ್ ಸದಸ್ಯರಿಗೆ ಅಥವಾ ಅಡ್ಮಿನ್‌ಗೆ ಎಚ್ಚರಿಕೆ ಸಂದೇಶವೂ ಬರುತ್ತದೆ. ಗ್ರೂಪ್‌ನಿಂದ ಹಿಂದೆ ಸರಿಯಲು ಮತ್ತು ಅಡ್ಮಿನ್‌ಗೆ ಗ್ರೂಪ್ ಡಿಲೀಟ್ ಮಾಡಲು ಅಲರ್ಟ್ ಮಾಡುತ್ತದೆ. ಈ ಆಯ್ಕೆ ವಾಟ್ಸಾಪ್ ಗ್ರೂಪ್ ಇನ್ಫೋದಲ್ಲಿ ಇರಲಿದೆ. ಅಂತೆಯೇ ಈ ಮುಕ್ತಾಯದ ದಿನಾಂಕವನ್ನು ಬದಲಾವಣೆ ಮಾಡುವ ಅವಕಾಶವೂ ಇದೆ. ಆ್ಯಕ್ಟಿವ್ ಇಲ್ಲದ ಗ್ರೂಪ್‌ನಿಂದ ಹಿಂದೆ ಸರಿದು ಮೆಮೊರಿಯನ್ನು ಉಳಿತಾಯ ಮಾಡಬಹುದು.

### ಏಕಕಾಲಕ್ಕೆ 100 ಫೋಟೊ-ವಿಡಿಯೊ!

ಏಕಕಾಲಕ್ಕೆ 100 ಫೋಟೊಗಳು ಅಥವಾ ವಿಡಿಯೊಗಳನ್ನು ಕಳುಹಿಸಲು ಅನುಕೂಲವಾಗುವಂತೆ ವಾಟ್ಸಾಪ್ ಅನ್ನು ಅಪ್‌ಗ್ರೇಡ್ ಮಾಡಲಾಗುತ್ತಿದೆ. ಈ ಬಗ್ಗೆ 'ಮೆಟಾ' ಈಚೆಗೆ ಮಾಹಿತಿ ಹಂಚಿಕೊಂಡಿದ್ದು, ಹೆಚ್ಚು ವಿಡಿಯೊ ಹಾಗೂ ಫೋಟೊಗಳನ್ನು ವಾಟ್ಸಾಪ್ ಮೂಲಕ ಹಂಚಿಕೊಳ್ಳುವವರ ಬಹುದಿನದ ಬೇಡಿಕೆಗೆ ಗ್ರೀನ್ ಸಿಗ್ನಲ್ ನೀಡಿದೆ. ಸದ್ಯ 30 ಫೋಟೊಗಳು ಅಥವಾ ವಿಡಿಯೊಗಳನ್ನು ಏಕಕಾಲಕ್ಕೆ ಕಳುಹಿಸಲು ಅವಕಾಶವಿದೆ. ■